# ಕರ್ನಾಟಕ  ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ :  17-03-2021    ಪ್ರಶ್ನೆ ಸಂಖ್ಯೆ :  1276 (1266)

ಸದಸ್ಯರ ಹೆಸರು ಮತ್ತು ಕ್ಷೇತ್ರ :  ಶ್ರೀ ಸಿ.ಎಂ. ಲಿಂಗಪ್ಪ (ನಾಮನಿರ್ದೇಶನ)

ಉತ್ತರ ನೀಡಬೇಕಾದ ದಿನಾಂಕ :  17-03-2021

ಉತ್ತರಿಸುವ ಸಚಿವರು :  ಕಂದಾಯ ಸಚಿವರು

ವಿಷಯ :  ರೈತರ ಜಮೀನುಗಳ ಸರ್ವೆ ಕಾರ್ಯ ಆಗದಿರುವ ಬಗ್ಗೆ

(ಅ) ರಾಮನಗರ ತಾಲ್ಲೂಕಿನಲ್ಲಿ ಸುಮಾರು 11600 ಅರ್ಜಿಗಳ ಬಾಬ್ತು ರೂ. 4,00,000/-ಗಳ ಶುಲ್ಕವನ್ನ ಪಡೆದು ಸರ್ವೆ ಕಾರ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರೈತರು ಹಣ ಕಟ್ಟಿದ ಎಷ್ಟು ದಿನದಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸಲು ಸಮಯ ನಿಗದಿಪಡಿಸಿದೇ ;

(ಇ) ರಾಮನಗರ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ 11600 ಅರ್ಜಿಗಳನ್ನು ಎಷ್ಟು ದಿನದಲ್ಲಿ ವಿಲೆ ಮಾಡಿಕೊಡಲು ಸರ್ಕಾರ ಕ್ರಮವಹಿಸುತ್ತದೆ;

(ಈ) ಸರ್ವೆ ಕಾರ್ಯ ವಿಳಂಬವಾದಷ್ಟು ರೈತರಿಗೆ ಸ್ಕೆಚ್ಚು, ಪೋಡಿ, ಪಹಣಿ ನೊಂದಣಿ ಸಹಕಾರ ಸಂಘಗಳ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಹಾಗೂ ಮಾರಾಟ ಮಾಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ಶೀಘ್ರ ಪರಿಹಾರ ಒದಗಿಸುವುದೇ ?